**All India Radio: Bangalore**
**National Bulletin In Kannada**
**01.01.2026 1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**01.01.2026 1.10 pm**

**<>><><*><><<>**

ಮುಖ್ಯಾಂಶಗಳು

**೧. ಹೊಸ ಕಾರ್ಮಿಕ ಸಂಹಿತೆಗಳಿಗೆ ಕರಡು ನಿಯಮ ಪ್ರಕಟಿಸಿದ ಕೇಂದ್ರ ಸರ್ಕಾರ**

**೨. ಬಿಎಸ್‌ಎನ್‌ಎಲ್‌ನಿಂದ ವಾಯ್ಸ್ ಓವರ್ ವೈಫೈ ಸೇವೆ ಇಂದಿನಿಂದ ಆರಂಭ**

**೩. ವಿಕಸಿತ ಭಾರತ ಜಿ ರಾಮ್ ಜಿ ಯೋಜನೆಯಿಂದ ಕಾರ್ಮಿಕರು, ಮಹಿಳೆಯರು ಹಾಗೂ ರೈತರ ಸಬಲೀಕರಣ - ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್**

**೪. ಜಾಗತಿಕ ಹಿಂಜರಿತಗಳ ನಡುವೆ ಭಾರತೀಯ ಆರ್ಥಿಕತೆ ತೀವ್ರ ಅಭಿವೃದ್ಧಿ - ಆರ್‌ಬಿಐ**

**<>><><*><><<>**

ಕೇಂದ್ರವು ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳಿಗೆ ಕರಡು ನಿಯಮಗಳನ್ನು ಪ್ರಕಟಿಸಿದೆ. ಈ ಕಾರ್ಮಿಕ ಸಂಹಿತೆಗಳು - ವೇತನ ಸಂಹಿತೆ-೨೦೧೯, ಕೈಗಾರಿಕಾ ಸಂಬಂಧ ಸಂಹಿತೆ-೨೦೨೦, ಸಾಮಾಜಿಕ ಭದ್ರತೆ ಸಂಹಿತೆ-೨೦೨೦ ಮತ್ತು ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ-೨೦೨೦. ನಿಯಮಗಳು ಕಾರ್ಮಿಕರು, ವೇತನಗಳು, ಉದ್ಯೋಗದ ಪ್ರಕಾರಗಳು, ಗ್ರಾಚ್ಯುಟಿ, ಬೋನಸ್ ಮತ್ತು ಗಿಗ್ ವರ್ಕರ್‌ಗಳು ಸೇರಿದಂತೆ ಕಾರ್ಮಿಕರ ಸಾಮಾಜಿಕ ಭದ್ರತೆಯನ್ನು ವ್ಯಾಖ್ಯಾನಿಸುತ್ತವೆ. ಈ ಕರಡು ನಿಯಮಗಳು ಸಾರ್ವಜನಿಕ ಸಂವಾದಕ್ಕೆ ಮುಕ್ತವಾಗಿದ್ದು, ಸಾರ್ವಜನಿಕರಿಂದ ೪೫ ದಿನಗಳಲ್ಲಿ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಆಹ್ವಾನಿಸಲಾಗಿದೆ. ದೇಶದಲ್ಲಿ ಅಸ್ತಿತ್ವದಲ್ಲಿರುವ, ದಶಕಗಳಷ್ಟು ಹಳೆಯದಾದ ಕಾರ್ಮಿಕ ಕಾನೂನುಗಳನ್ನು ಸರಳೀಕರಿಸಲು ಮತ್ತು ಸುವ್ಯವಸ್ಥಿತಗೊಳಿಸಲು ಕಳೆದ ವರ್ಷ ನವೆಂಬರ್ ೨೧ ರಂದು ಈ ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳ ಅನುಷ್ಠಾನವನ್ನು ಕಾರ್ಮಿಕ ಸಚಿವಾಲಯ ಘೋಷಿಸಿತ್ತು. ಹೊಸ ಕಾರ್ಮಿಕ ಸಂಹಿತೆಗಳು ದೇಶದ ಕಾರ್ಯಪಡೆಗೆ ಉತ್ತಮ ವೇತನ, ಸುರಕ್ಷತೆ, ಸಾಮಾಜಿಕ ಭದ್ರತೆ ಮತ್ತು ಕಲ್ಯಾಣವನ್ನು ಖಚಿತಪಡಿಸುತ್ತದೆ ಎಂದು ಕಾರ್ಮಿಕ ಸಚಿವಾಲಯ ತಿಳಿಸಿದೆ. ಕಾರ್ಮಿಕ ಸಂಹಿತೆಗಳು ಎಲ್ಲಾ ಕಾರ್ಮಿಕರಿಗೆ ಸಕಾಲಿಕ ಕನಿಷ್ಠ ವೇತನ, ಯುವಕರಿಗೆ ನೇಮಕಾತಿ ಪತ್ರಗಳು, ಮಹಿಳೆಯರಿಗೆ ಸಮಾನ ವೇತನ ಮತ್ತು ಗೌರವ, ೪೦

ಕೋಟಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಮತ್ತು ಒಂದು ವರ್ಷದ ಉದ್ಯೋಗದ ನಂತರ ಸ್ಥಿರ-ಅವಧಿಯ ಉದ್ಯೋಗಿಗಳಿಗೆ ಗ್ರಾಚ್ಯುಟಿಯನ್ನು ಖಾತರಿಪಡಿಸುತ್ತವೆ. ಈ ಸುಧಾರಣೆಗಳು ೪೦ ವರ್ಷಕ್ಕಿಂತ ಮೇಲ್ಪಟ್ಟ ಕಾರ್ಮಿಕರಿಗೆ ಉಚಿತ ವಾರ್ಷಿಕ ಆರೋಗ್ಯ ತಪಾಸಣೆ, ಅಧಿಕಾವಧಿ ಕೆಲಸಕ್ಕೆ ಎರಡು ಪಟ್ಟು ವೇತನ ಮತ್ತು ಅಂತಾರಾಷ್ಟ್ರೀಯ ಮಾನದಂಡಗಳ ಪ್ರಕಾರ ಕಾರ್ಮಿಕರಿಗೆ ಸಾಮಾಜಿಕ ನ್ಯಾಯದ ಖಾತರಿಯನ್ನು ಖಚಿತಪಡಿಸುತ್ತವೆ.

**<>><><*><><<>**

ಹೊಸ ವರ್ಷದ ಈ ಶುಭ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಮತ್ತು ಪ್ರಧಾನಿ ನರೇಂದ್ರ ಮೋದಿಯವರು ದೇಶವಾಸಿಗಳಿಗೆ ಶುಭ ಕೋರಿದ್ದಾರೆ. ರಾಷ್ಟ್ರಪತಿಯವರು ತಮ್ಮ ಸಂದೇಶದಲ್ಲಿ ಹೊಸವರ್ಷವು ಹೊಸ ಶಕ್ತಿ ಮತ್ತು ಸಕಾರಾತ್ಮಕ ಬದಲಾವಣೆಯನ್ನು ಸಂಕೇತಿಸುತ್ತದೆ. ಪ್ರತಿಯೊಬ್ಬರು ರಾಷ್ಟ್ರ ನಿರ್ಮಾಣ, ಸಾಮಾಜಿಕ ಸಾಮರಸ್ಯ ಮತ್ತು ಪರಿಸರ ಸಂರಕ್ಷಣೆಗೆ ಕಟಿಬದ್ಧರಾಗೋಣ ಎಂದು ಹೇಳಿದ್ದಾರೆ. ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು, ಸಾಮಾಜಿಕ ಜಾಲತಾಣದಲ್ಲಿ ಹೊಸವರ್ಷವು ಶಾಂತಿ, ಆರೋಗ್ಯ, ಸಂತೋಷ ಮತ್ತು ಸಮೃದ್ಧಿಯನ್ನು ತರಲಿ ಎಂದು ಹಾರೈಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರು ಉತ್ತಮ ಆರೋಗ್ಯ, ಸಮೃದ್ಧಿ ಮತ್ತು ಯಶಸ್ಸು ದೊರಕಲಿ, ಜೊತೆಗೆ ಶಾಂತಿಯುತ ಸಮಾಜ ನಿರ್ಮಾಣವಾಗಲಿ ಎಂದು ಪ್ರಾರ್ಥಿಸುವುದಾಗಿ ತಿಳಿಸಿದ್ದಾರೆ. ಲೋಕಸಭಾಧ್ಯಕ್ಷರಾದ ಓಂ ಬಿರ್ಲಾ ಅವರು ಹೊಸ ವರ್ಷವು ಹೊಸ ಕನಸುಗಳ ಸಾಕಾರವಾಗಲಿ ಹೊಸ ಅವಕಾಶಗಳು ಮತ್ತು ಸುಖ, ಸಮೃದ್ಧಿ ಪ್ರತಿಯೊಬ್ಬರ ಬಾಳಿನಲ್ಲೂ ತುಂಬಿರಲಿ ಎಂದು ಶುಭ ಕೋರಿದ್ದಾರೆ.

**<>><><*><><<>**

ಹೊಸ ವರ್ಷದಂದು ಬಿಎಸ್ಎನ್ಎಲ್ ದೇಶಾದ್ಯಂತ ವಾಯ್ಸ್ ಓವರ್ ವೈಫೈ ಕಾಲಿಂಗ್ ಎಂದು ಕರೆಯಲ್ಪಡುವ ವಾಯ್ಸ್ ಓವರ್ ವೈಫೈ ಅನ್ನು ಬಿಡುಗಡೆ ಮಾಡುವುದಾಗಿ ಘೋಷಿಸಿದೆ. ಈ ಸುಧಾರಿತ ಸೇವೆಯು, ಎಲ್ಲ ಬಿಎಸ್ಎನ್ಎಲ್ ಗ್ರಾಹಕರಿಗೆ ಲಭ್ಯವಿದೆ. ಈ ವೈಫೈ ಕರೆಗಳನ್ನು ಯಾವುದೇ ಹೆಚ್ಚುವರಿ ಶುಲ್ಕವಿಲ್ಲದೆ ಉಚಿತವಾಗಿ ನೀಡಲಾಗುತ್ತಿದೆ. ವಾಯ್ಸ್ ಓವರ್ ವೈಫೈ ಗ್ರಾಹಕರಿಗೆ ವೈ-ಫೈ ನೆಟ್‌ವರ್ಕ್ ಮೂಲಕ ಧ್ವನಿ ಕರೆಗಳು ಮತ್ತು ಸಂದೇಶಗಳನ್ನು ಮಾಡಲು ಮತ್ತು ಸ್ವೀಕರಿಸಲು ಅನುವು ಮಾಡಿಕೊಡುತ್ತದೆ. ಮನೆಗಳು, ಕಚೇರಿಗಳು, ನೆಲಮಾಳಿಗೆಗಳು ಮತ್ತು ದೂರದ ಸ್ಥಳಗಳಂತಹ ದುರ್ಬಲ ಮೊಬೈಲ್ ಸಿಗ್ನಲ್ ಹೊಂದಿರುವ ಪ್ರದೇಶಗಳಲ್ಲಿ ಸ್ಪಷ್ಟ ಮತ್ತು ವಿಶ್ವಾಸಾರ್ಹ ಸಂಪರ್ಕವನ್ನು ಖಚಿತಪಡಿಸುತ್ತದೆ ಎಂದು ಸಂವಹನ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

<>><><*><><<>

ವಿಕಸಿತ ಭಾರತ್ ಜಿ-ರಾಮ್-ಜಿ ಯೋಜನೆಯು ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿ, ಮಹಿಳೆಯರು ಮತ್ತು ರೈತರನ್ನು ಸಬಲೀಕರಣಗೊಳಿಸುತ್ತದೆ ಹಾಗೂ ಆ ಮೂಲಕ ಗ್ರಾಮೀಣ ಉದ್ಯಮಶೀಲತೆಯನ್ನು ಉತ್ತೇಜಿಸುತ್ತದೆ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು. ರೈತರು, ಕಾರ್ಮಿಕರು ಮತ್ತು ಲಖ್ಪತಿ ದೀದಿಗಳಿಗೆ ಹೊಸ ವರ್ಷದ ಶುಭಾಶಯಗಳನ್ನು ಕೋರಿದ ಸಚಿವರು, ಎರಡು ಕೋಟಿಗೂ ಹೆಚ್ಚು ಲಖ್ಪತಿ ದೀದಿಗಳು ದೇಶಾದ್ಯಂತ ಸ್ವಾವಲಂಬಿಗಳಾಗುತ್ತಿದ್ದಾರೆ ಮತ್ತು ಇತರ ಮಹಿಳೆಯರಿಗೆ ಸ್ಫೂರ್ತಿ ನೀಡುತ್ತಿದ್ದಾರೆ ಎಂದು ಹೇಳಿದರು. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಗ್ರಾಮಗಳು, ಬಡವರು, ರೈತರು, ಕಾರ್ಮಿಕರು, ಯುವಕರು ಮತ್ತು ಮಹಿಳೆಯರನ್ನು ಸಬಲೀಕರಣಗೊಳಿಸುವ ಮೂಲಕ ವಿಕಸಿತ ಭಾರತದ ಅಡಿಪಾಯವನ್ನು ಬಲಪಡಿಸಲು ಸರ್ಕಾರ ಬದ್ಧವಾಗಿದೆ ಎಂದು ಅವರು ತಿಳಿಸಿದರು. ಹೊಸ ವರ್ಷದಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು, ರೈತರ ಆದಾಯವನ್ನು ಹೆಚ್ಚಿಸಲು ಮತ್ತು ಗ್ರಾಮೀಣ ಮೂಲಸೌಕರ್ಯವನ್ನು ಬಲಪಡಿಸುವ ಪ್ರಯತ್ನಗಳನ್ನು ತೀವ್ರಗೊಳಿಸಲಾಗುವುದು ಎಂದು ಸಚಿವರು ಹೇಳಿದರು.

<>><><*><><<>

ಎಸ್ಐಆರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾ ಆಯುಕ್ತರು ಮತ್ತು ಮುಖ್ಯ ಚುನಾವಣಾ ಅಧಿಕಾರಿ ಸಿಇಒ ವಿರುದ್ಧ ಎರಡು ಪೊಲೀಸ್ ದೂರುಗಳು ದಾಖಲಾಗಿರುವ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು ಬಲವಾಗಿ ನಿರಾಕರಿಸಿದೆ. ಔಪಚಾರಿಕ ಹೇಳಿಕೆಯಲ್ಲಿ, ಸಿಇಒ ಕಚೇರಿಯು ಆರೋಪಗಳನ್ನು ಪೂರ್ವ ಯೋಜಿತ ಮತ್ತು ಆಧಾರರಹಿತ ಎಂದು ತಳ್ಳಿಹಾಕಿದ್ದು, ಎಸ್ಐಆರ್ ೨೦೨೬ಕ್ಕೆ ತಮ್ಮ ಕಾನೂನು ಕರ್ತವ್ಯಗಳನ್ನು ನಿರ್ವಹಿಸುವ ಅಧಿಕಾರಿಗಳನ್ನು ಬೆದರಿಸುವ ಉದ್ದೇಶಪೂರ್ವಕ ಪ್ರಯತ್ನ ಎಂದು ಹೇಳಿದೆ. ಈ ಬೆದರಿಕೆ ತಂತ್ರಗಳನ್ನು ಬಾಹ್ಯ ಒತ್ತಡದ ಮೂಲಕ ಚುನಾವಣಾ ಪ್ರಕ್ರಿಯೆಯನ್ನು ಹಳಿತಪ್ಪಿಸುವ ಉದ್ದೇಶ ಹೊಂದಿದ್ದು, ಅಂತಹ ಪ್ರಯತ್ನಗಳು ಯಶಸ್ವಿಯಾಗುವುದಿಲ್ಲ. ಈ ಸಂಘಟಿತ ಮತ್ತು ವ್ಯವಸ್ಥಿತ ದೂರುಗಳ ಹಿಂದಿನ ಪಿತೂರಿಯನ್ನು ಬಹಿರಂಗಪಡಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಹೇಳಿಕೆಯಲ್ಲಿ ಆಯೋಗ ತಿಳಿಸಿದೆ.

<>><><*><><<>

ಜಾಗತಿಕ ಹಿಂಜರಿತಗಳ ಹೊರತಾಗಿಯೂ, ಬಲವಾದ ದೇಶೀಯ ಬೇಡಿಕೆ, ಮಧ್ಯಮ ಹಣದುಬ್ಬರ ಮತ್ತು ವಿವೇಕಯುತ ಸ್ಥೂಲ ಆರ್ಥಿಕ ನೀತಿಗಳಿಂದ ಬೆಂಬಲಿತವಾದ ಭಾರತೀಯ ಆರ್ಥಿಕತೆಯು ತೀವ್ರ ವೇಗದಲ್ಲಿ ಅಭಿವೃದ್ಧಿ ಹೊಂದುತ್ತಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್, ಹಣಕಾಸು

ಸ್ಥಿರತೆ ವರದಿಯಲ್ಲಿ ತಿಳಿಸಿದೆ. ಉತ್ತಮ ಬ್ಯಾಲೆನ್ಸ್ ಶೀಟ್‌ಗಳು, ಅನುಕೂಲಕರ ಹಣಕಾಸು ಪರಿಸ್ಥಿತಿಗಳು ಮತ್ತು ಹಣಕಾಸು ಮಾರುಕಟ್ಟೆಗಳಲ್ಲಿ ಕಡಿಮೆ ಚಂಚಲತೆಯಿಂದ ಬೆಂಬಲಿತವಾದ ದೇಶೀಯ ಹಣಕಾಸು ವ್ಯವಸ್ಥೆಯು ಸ್ಥಿತಿಸ್ಥಾಪಕತ್ವವನ್ನು ಹೊಂದಿದೆ ಎಂದು ವರದಿ ವಿವರಿಸಿದೆ. ಆರ್‌ಬಿಐ ಪ್ರಕಾರ, ನಿಗದಿತ ವಾಣಿಜ್ಯ ಬ್ಯಾಂಕುಗಳ ಆರೋಗ್ಯವು ಉತ್ತಮ ಬಂಡವಾಳ, ಸುಧಾರಿತ ಆಸ್ತಿ ಗುಣಮಟ್ಟ ಮತ್ತು ಉತ್ತಮ ಲಾಭದೊಂದಿಗೆ ಸ್ಥಿರವಾಗಿದೆ. ಬ್ಯಾಂಕೇತರ ಹಣಕಾಸು ಕಂಪನಿಗಳು ಬಲಿಷ್ಠವಾಗಿ ಮುಂದುವರೆದಿವೆ. ವಿಮಾ ವಲಯವು ಸಹ ಸ್ಥಿತಿಸ್ಥಾಪಕತ್ವವನ್ನು ಹೊಂದಿದ್ದು, ಏಕೀಕೃತ ಸಾಲ ಪರಿಹಾರ ಅನುಪಾತವು ಕನಿಷ್ಠ ನಿಯಂತ್ರಕ ಮಿತಿಗಿಂತ ಮೇಲಿದೆ. ಮಾರ್ಚ್ ೨೦೨೫ ರ ಅಂತ್ಯದ ವೇಳೆಗೆ ಮನೆಸಾಲ ಒಟ್ಟು ದೇಶೀಯ ಉತ್ಪನ್ನದ ಶೇಕಡಾ ೪೧.೩ ಕ್ಕೆ ಏರಿತು, ಇದು ಐದು ವರ್ಷಗಳ ಸರಾಸರಿ ಶೇಕಡಾ ೩೮.೩ ರಿಂದ ಸ್ಥಿರವಾದ ಹೆಚ್ಚಳವನ್ನು ಗುರುತಿಸುತ್ತದೆ.

<>><><*><><<>

ಫೆಬ್ರವರಿ ೧ ರಿಂದ ತಂಬಾಕು ಉತ್ಪನ್ನಗಳ ಮೇಲೆ ಹೆಚ್ಚುವರಿ ಅಬಕಾರಿ ಸುಂಕವನ್ನು ಮತ್ತು ಪಾನ್ ಮಸಾಲದ ಮೇಲೆ ಹೊಸದಾಗಿ ಸೆಸ್ ವಿಧಿಸುವುದಾಗಿ ಕೇಂದ್ರ ಸರ್ಕಾರ ಅಧಿಸೂಚಿಸಿದೆ. ತಂಬಾಕು ಮತ್ತು ಪಾನ್ ಮಸಾಲದ ಮೇಲೆ ವಿಧಿಸಲಾಗುತ್ತಿರುವ ಹೊಸ ಸುಂಕಗಳು ಜಿಎಸ್‌ಟಿ ದರಕ್ಕಿಂತ ಹೆಚ್ಚಿರುತ್ತದೆ ಮತ್ತು ಪಾಪದ ಸರಕುಗಳ ಮೇಲೆ ಪ್ರಸ್ತುತ ವಿಧಿಸಲಾಗುತ್ತಿರುವ ಪರಿಹಾರ ಸೆಸ್‌ನ ಬದಲಾಗಿ ಹೊಸ ಸುಂಕವನ್ನು ಜಾರಿಗೊಳಿಸಲಾಗುತ್ತಿದೆ. ಫೆಬ್ರವರಿ ೧ ರಿಂದ ಪಾನ್ ಮಸಾಲಾ, ಸಿಗರೇಟು, ತಂಬಾಕು ಮತ್ತು ಅಂತಹದೇ ಉತ್ಪನ್ನಗಳು ಜಿಎಸ್‌ಟಿ ಶೇಕಡ ೪೦ ರಷ್ಟು ವ್ಯಾಪ್ತಿಗೆ ಬರಲಿದೆ. ಇದರ ಜೊತೆಗೆ ಪಾನ್ ಮಸಾಲದ ಮೇಲೆ ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತಾ ಸೆಸ್‌ನ್ನು ವಿಧಿಸಲಾಗುವುದು ಮತ್ತು ಹೆಚ್ಚುವರಿ ಅಬಕಾರಿ ಸುಂಕವನ್ನು ಅಂತಹದೇ ಉತ್ಪನ್ನಗಳ ಮೇಲೆ ವಿಧಿಸಲಾಗುತ್ತದೆ. ಪಾನ್‌ಮಸಾಲ ತಯಾರಿಕೆಯ ಮೇಲೆ ರಾಷ್ಟ್ರೀಯ ಭದ್ರತಾ ಸುಂಕ ಮತ್ತು ತಂಬಾಕಿನ ಮೇಲೆ ಅಬಕಾರಿ ಸುಂಕ ಹೇರುವ ಎರಡೂ ಮಸೂದೆಗಳನ್ನು ಸಂಸತ್ ಚಳಿಗಾಲದ ಅಧಿವೇಶನದಲ್ಲಿ ಅಂಗೀಕರಿಸಿದೆ.

<>><><*><><<>

ಆಟೋಮೊಬೈಲ್‌ಗಳಿಗಾಗಿ ಉತ್ಪಾದನಾ-ಸಂಬಂಧಿತ ಪ್ರೋತ್ಸಾಹಧನ-ಪಿಎಲ್‌ಐ ಯೋಜನೆಯು ಇಲ್ಲಿಯವರೆಗೆ ೩೫ ಸಾವಿರ ೬೫೭ ಕೋಟಿ ರೂಪಾಯಿಗಳ ಸಂಚಿತ ಹೂಡಿಕೆಗಳನ್ನು ಆಕರ್ಷಿಸಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಸುಧಾರಿತ ಆಟೋಮೋಟಿವ್ ತಂತ್ರಜ್ಞಾನ ಉತ್ಪನ್ನಗಳಲ್ಲಿ ದೇಶದ ಉತ್ಪಾದನಾ ಸಾಮರ್ಥ್ಯಗಳನ್ನು ಹೆಚ್ಚಿಸಲು ಆಟೋಮೊಬೈಲ್‌ಗಾಗಿ ಈ ಯೋಜನೆಯನ್ನು

ಪರಿಚಯಿಸಲಾಗಿದೆ. ಈ ಯೋಜನೆಯು ಸುಮಾರು ೨೬ ಸಾವಿರ ಕೋಟಿ ರೂಪಾಯಿಗಳ ಒಟ್ಟು ಬಜೆಟ್ ವೆಚ್ಚವನ್ನು ಹೊಂದಿದ್ದು, ೨೦೨೩ ರಿಂದ ೨೦೨೮ ರವರೆಗಿನ ಐದು ವರ್ಷಗಳ ಕಾರ್ಯಕ್ಷಮತೆಯ ಅವಧಿಯನ್ನು ಒಳಗೊಂಡಿದೆ. ಈ ಯೋಜನೆಯಡಿಯಲ್ಲಿ, ಒಟ್ಟು ಹತ್ತು ಲಕ್ಷಕ್ಕೂ ಹೆಚ್ಚು ಯೂನಿಟ್ ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳು ಮತ್ತು ಎರಡು ಲಕ್ಷ ೩೮ ಸಾವಿರಕ್ಕೂ ಹೆಚ್ಚು ಯೂನಿಟ್ ವಿದ್ಯುತ್ ಚಾಲಿತ ತ್ರಿಚಕ್ರ ವಾಹನಗಳಿಗೆ ಪ್ರೋತ್ಸಾಹ ಧನ ನೀಡಲಾಗಿದೆ ಎಂದು ಭಾರೀ ಕೈಗಾರಿಕಾ ಸಚಿವಾಲಯ ತಿಳಿಸಿದೆ. ಸುಮಾರು ೮೦ ಸಾವಿರ ಯೂನಿಟ್ ವಿದ್ಯುತ್ ಚಾಲಿತ ನಾಲ್ಕು ಚಕ್ರದ ವಾಹನಗಳು ಮತ್ತು ಸುಮಾರು ಒಂದು ಸಾವಿರ ೪೦೦ ವಿದ್ಯುತ್ ಚಾಲಿತ ಬಸ್‌ಗಳು ಸಹ ಪ್ರೋತ್ಸಾಹ ಧನವನ್ನು ಪಡೆದಿವೆ.

<>><><*><><<>

ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು ಇಂದು ಹೊಸ ಲೋಗೋವನ್ನು ಅನಾವರಣಗೊಳಿಸಲಿದೆ. ಇದು ಸಚಿವಾಲಯದ ಆಧುನಿಕ ಸಾಂಸ್ಥಿಕ ಗುರುತು ಮತ್ತು ಸಾರ್ವಜನಿಕರ ಸಹಭಾಗಿತ್ವದ ಪ್ರತೀಕ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಹೊಸ ಲೋಗೊವು ನಾಗಿರೀಕ ಕೇಂದ್ರಿತವಾಗಿರಲಿದೆ. ಸಾಂಖ್ಯಿಕ ಎಂಬುದು ಇದರ ಶುಭ ಚಿಹ್ನೆಯಾಗಲಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಸಂಜೆ ೬.೪೦ ಕ್ಕೆ ><><<>**